ಓಎಸ್ ನಂ.04 ಃ 2013
ಡಿಡಬ್ಲ್ಯೂ-2

ದಿನಾಂಕ 15.06.2017 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂ.4 ರಿಂದ 6 ರವರ ಪರ ಶ್ರೀ ಎಸ್‌ಟಿಆರ್ ವಕೀಲರಿಂದಃ

ದವಾ ಆಸ್ತಿಗಳು ಹಿರಿಯರಿಂದ ಬಂದಿರುತ್ತವೆ. ದಾವಾ ಆಸ್ತಿಗಳ ಪೈಕಿ ಬಡದಾಳ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳನ್ನು ನನ್ನ ತಂದೆಯು ಆತನ ಜೀವಿತ ಅವಧಿಯಲ್ಲಿ ಸಾಗುವಳಿ ಮಾಡುತ್ತಿದ್ದನು. ಅವುಗಳನ್ನು ನಾನು ಮತ್ತು ಪ್ರತಿವಾದಿ ನಂ.1, 2 ರವರು ಸೇರಿ ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯೇ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ದಾವಾದ ಆಸ್ತಿಗಳಲ್ಲಿ ನನಗೆ, ನನ್ನ ಸಹೋದರ ಸಹೋದರಿಯರಿಗೆ ಹಿಸ್ಸೆ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.4 ರಿಂದ 6 ರವರಿಗೆ ದಾವಾದ ಆಸ್ತಿಗಳಲ್ಲಿ ಪಾಲು ಕೊಡುತ್ತೇವೆ ಎಂದು ಇದುವರೆಗೂ ದಿನಗಳನ್ನು ಮುಂದೂಡಿರುತ್ತೀರಿ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ವಾದಿ ಪರ ವಕೀಲರು ಇರುವದಿಲ್ಲ ಎಂದು ತಿಳಿಸಿದ್ದು ಕಾರಣ ಅವರ ಪರ ಪಾಟಿ ಸವಾಲು ಏನು ಇಲ್ಲ ಎಂದು ತೆಗೆಕೊಳ್ಳಲಾಯಿತು.

ಮರು ವಿಚಾರಣೆ ಃ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪೂರ